## ವಾರ್ತಾ ವಿಶ್ಲೇಷಣೆ

# ಭಕ್ತಿಯಿದ್ದಲ್ಲಿ ಭಗವಂತ

ಮೇ ೧೭ ನೇ ತಾರೀಖಿನ *Times of India*ದಲ್ಲಿ ಒಂದು ವರದಿ. ಕರ್ನಾಟಕದ ಹಾಸನ ಜಿಲ್ಲೆಯಲ್ಲಿ ತೇರಣ್ಯ ಎಂಬ ಹಳ್ಳಿ. ಇಷ್ಟು ದಿನ ಆ ಹಳ್ಳಿಯ ಹೆಸರನ್ನು ಕೇಳಿದವರೂ ತುಂಬಾ ಕಡಿಮೆ. ಆದರೆ ಇನ್ನು ಮೇಲೆ ಹಾಗಲ್ಲ. ಕಾರಣ ಅದೊಂದು ತೀರ್ಥಕ್ಷೇತ್ರವಾಗಿಬಿಟ್ಟಿದೆ. ಅದಕ್ಕೆ ಕಾರಣ ಆಕಸ್ಮಿಕ.

೪೦ ಅಡಿಯ ಹಸಿರು ಬಣ್ಣದ ಸುಮಾರು ೧೦೦ ಟನ್ ತೂಕದ ಗ್ರಾನೈಟ್ ಕಲ್ಲನ್ನು ಜನ ಪೂಜಿಸಲು ಶುರು ಮಾಡಿದ್ದಾರೆ. ಆ ಕಲ್ಲು ಗುರಿ ಸೇರಬೇಕಾಗಿದ್ದ ಸ್ಥಳ ತಮಿಳುನಾಡಿನ ತಿರುವಳ್ಳೂರ್ ತಾಲ್ಲೂಕಿನ ಪೆರಿಯಕುಪ್ಪಂ ಎನ್ನುವ ಜಾಗ. ಉದ್ದೇಶ ಆ ಕಲ್ಲಿನಿಂದ ಒಂದು ಆಂಜನೇಯನ ವಿಗ್ರಹವನ್ನು ಮಾಡಿಸಿ ಅಲ್ಲಿಯ ದೇವಸ್ಥಾನದಲ್ಲಿ ಇಡಲು. ಆದರೆ ಆಂಜನೇಯ ೪ ಗೋಡೆಗಳ ಮಧ್ಯದಲ್ಲಿ ಬಂಧಿಯಾಗಿರುವುದಕ್ಕಿಂತ ಹಸಿರು ಬಯಲಿನಲ್ಲಿ ಆಕಾಶದ ಚಪ್ಪರದ ಕೆಳಗೇ, ಸ್ಥಪತಿಗಳಿಂದ ಹೊಡೆತ ತಿನ್ನದೇ, ಮೂಲ ಕಲ್ಲಿನ ರೂಪದಲ್ಲೇ ಇದ್ದು ಭಕ್ತರ ಪೂಜೆ ಸ್ವೀಕರಿಸಲು ನಿರ್ಧರಿಸಿದ್ದಾನೆ. ಬಹುಶಃ ಆ ಕಲ್ಲಿನ ಮಾಲೀಕ ರಾಮಕೃಷ್ಣ ಗೌಡರು ತಮ್ಮ ಬಯಲಿನಲ್ಲಿ ಹಲವಾರು ವರ್ಷಗಳಿಂದ ಬಿದ್ದಿದ್ದ ಈ ಬೃಹದಾಕಾರ ಕಲ್ಲು, ಇದ್ದಕ್ಕಿದ್ದ ಹಾಗೆ ಇಷ್ಟೊಂದು ಪ್ರಖ್ಯಾತಿ ಪಡೆದು ಸಾವಿರಾರು ಜನರಿಂದ ಪೂಜೆ ಸ್ವೀಕರಿಸುತ್ತದೆಂದು ಊಹಿಸಿರಲಾರರು. ಆದರೆ ಪಾಪ, ಅದು ಅವರ ಹೊಲದಲ್ಲಿ ಪೂಜಿಸಲ್ಪಡಲಿಲ್ಲ.

ಇದರ ಕಥೆ ಇಷ್ಟೇ. ವೆಂಕಟೇಶ್ ಎನ್ನುವವರು ತಿರುವಳ್ಳೂರಿನ, ಪೆರಿಯಕುಪ್ಪಂ ದೇವಸ್ಥಾನದ ಟ್ರಸ್ಟಿ. ಆಂಜನೇಯನ ವಿಗ್ರಹವನ್ನು ಮಾಡಿಸಲು, ಗ್ರಾನೈಟ್‌ಗೆ ಪ್ರಸಿದ್ಧವಾದ ಕರ್ನಾಟಕಕ್ಕೆ, ಒಳ್ಳೆಯ ಕಲ್ಲನ್ನು ಹುಡುಕಿಕೊಂಡು ಬಂದರು. ಅವರು ಪ್ರಯಾಣ ಮಾಡುತ್ತಿರುವಾಗ ಮುರುಕಲ್ ಎಂಬ ಹಳ್ಳಿಯ ಒಂದು ಜಮೀನಿನಲ್ಲಿ ೪೦ ಅಡಿಯ ಒಂದು ದೊಡ್ಡ ಗ್ರಾನೈಟ್ ಕಲ್ಲು ಬಿದ್ದಿರುವುದನ್ನು ನೋಡಿ ಆಶ್ಚರ್ಯಪಟ್ಟರು. ಅದು ರಾಮಕೃಷ್ಣ ಗೌಡರ ಗದ್ದೆಯಾಗಿತ್ತು. ಅವರು ರಾಮಕೃಷ್ಣ ಗೌಡರ ಬಳಿ ಆಂಜನೇಯನ ವಿಗ್ರಹಕ್ಕಾಗಿ ಕಲ್ಲು ಹುಡುಕುತ್ತಿರುವ ವಿಷಯವನ್ನು ತಿಳಿಸಿದರು. ಅಂತಹ ಕಲ್ಲಿನ ಬೆಲೆ ಏನಿಲ್ಲವೆಂದರೂ ೫ ಅಥವಾ ೬ ಲಕ್ಷ. ವೆಂಕಟೇಶ್ ಅವರಿಗೆ ಹೇಳಿದರು, "ಆಂಜನೇಯನ ದೇವಸ್ಥಾನ ಕಟ್ಟಲು ನಾವು ಒಂದು ಟ್ರಸ್ಟ್ ಮಾಡಿದ್ದೇವೆ. ಇದಕ್ಕಾಗಿ ನಾವು ೩ ಕೋಟಿ ಹಣವನ್ನು ಸಂಗ್ರಹಿಸಿ, ದೇವಸ್ಥಾನಕ್ಕಾಗಿ ನೆಲವನ್ನೂ ಕೊಂಡಿದ್ದೇವೆ. ಈ ಕಲ್ಲನ್ನು ನೀವು ನಮಗೆ ಮಾರಿದರೆ, ಇದರಿಂದ ವಿಗ್ರಹ ತಯಾರಿಸುತ್ತೇವೆ." ರಾಮಕೃಷ್ಣಗೌಡರು, ಸಾಧಾರಣ ರೈತರಾದರೂ, ಇದು ಆಂಜನೇಯನ ವಿಗ್ರಹಕ್ಕೆ ಎಂದ ತಕ್ಷಣ ಅದನ್ನು ಅವರಿಗೆ ಬಿಟ್ಟಿಯಾಗಿ ಕೊಡಲು ತೀರ್ಮಾನಿಸಿದರು.

ಅದನ್ನು ಕೇಳಿ ಸಂತೋಷಪಟ್ಟ ಆ ದೇವಸ್ಥಾನದ ಟ್ರಸ್ಟಿಗಳು ಆ ಬೃಹದಾಕಾರದ ಕಲ್ಲನ್ನು ಸಾಗಿಸಲು ಬೇಕಾದ ಏರ್ಪಾಡು ಮಾಡಲಾರಂಭಿಸಿದರು. ಅದರ ಅರ್ಧದಷ್ಟು ಭಾಗ ಮಣ್ಣಿನ ಕೆಳಗಿತ್ತು. ಅದನ್ನು ಮೇಲೆತ್ತಲೇ ಸುಮಾರು ೧೮ ತಿಂಗಳು ಹಿಡಿಯಿತು. ಮಣ್ಣಿನಿಂದ ಮೇಲೆ ತೆಗೆದಮೇಲೆ ಅದನ್ನು ತಮಿಳು ನಾಡಿಗೆ ಹೇಗೆ ಸಾಗಿಸುವುದು ಎನ್ನುವ ಪ್ರಶ್ನೆ ತಲೆದೋರಿತು.

ಆ ಕಲ್ಲನ್ನು ಅಲ್ಲೇ ಕೆಲಸಗಾರರ ಸಹಾಯದಿಂದ ೩೬ ಅಡಿ ಉದ್ದ, ೧೮ ಅಡಿ ಅಗಲ ಹಾಗೂ ೧೦ ಅಡಿ ಎತ್ತರಕ್ಕೆ ಒಡೆಯಲಾಯಿತು. ಅವರುಗಳು ಅದರಿಂದ ೩೨ ಅಡಿಯ ಆಂಜನೇಯ ವಿಗ್ರಹವನ್ನು ಕೆತ್ತಿಸಲು ತೀರ್ಮಾನಿಸಿದ್ದರು. ಒಂದು ದೊಡ್ಡ ಕಂಪನಿಯಿಂದ ೯೬ ಚಕ್ರಗಳ ಒಂದು ಹೈಡ್ರಾಲಿಕ್ ಟ್ರಾಲಿಯನ್ನು ಈ ಕಲ್ಲನ್ನು ಸಾಗಿಸುವ ಕೆಲಸಕ್ಕಾಗಿ ತಂದರು. ಅದನ್ನು ಟ್ರಾಲಿಯಲ್ಲಿಡಲು ನೂರಾರು ಕೆಲಸಗಾರರಿಗೆ ಸುಮಾರು ೫೦ ದಿನಗಳು ಬೇಕಾಯಿತು. ಟ್ರಸ್ಟಿಗಳು ಅದನ್ನು ಟ್ರಾಲಿಗೆ ಏರಿಸಿ ನಿರಾಳವಾಗಿ ಉಸಿರಾಡಿದಾಗ ಅವರಿಗೆ ಮುಂದಿನ ಪ್ರಶ್ನೆ ಎಷ್ಟು ಗಹನವಾದುದು ಎಂದು ಅರ್ಥವಾಯಿತು. ರಸ್ತೆ ಸಾರಿಗೆಯ ಇಲಾಖೆಯವರು ಅದನ್ನು ಸಾಗಿಸಲು ಅವರಿಗೆ ಅನುಮತಿ ನೀಡಲಿಲ್ಲ. ಇಂತಹ ಭಾರ ರಸ್ತೆಯ ಮಧ್ಯದಲ್ಲಿ ಬರುವ ಸೇತುವೆಯ ಮೇಲೆ ಹೋಗುವಾಗ ಸೇತುವೆ ಕುಸಿಯಬಹುದು ಎಂದು ಶಂಕಿಸಿದರು. ಟ್ರಸ್ಟಿಗಳು, ಬಹುಶಃ ಈ ಕ್ಷುದ್ರದೇವತೆಗಳನ್ನು ಸಂತೃಪ್ತಿ ಪಡಿಸುವ ರೀತಿಯಲ್ಲಿ ತೃಪ್ತಿಪಡಿಸಿ, ಅನುಮತಿ ಪಡೆದರು. ಕೊನೆಗೂ ಆ ದೀರ್ಘ ಯಾತ್ರೆ, ಆ ಹಳ್ಳಿಯ ಚಿಕ್ಕ ಚಿಕ್ಕ ರಸ್ತೆಯಲ್ಲಿ ನಿಧಾನವಾಗಿ ಹೊರಟಿತು. ಅದೊಂದು ರಥಯಾತ್ರೆಯಂತಿತ್ತು. ಮಾರ್ಗದಲ್ಲಿ ಹಳ್ಳಿಗಳನ್ನು ದಾಟುವಾಗ ಹಲವಾರು ಮನೆಗಳನ್ನು ಒಡೆಯ ಬೇಕಾಯಿತು. ಆ ಮಾಲೀಕರಿಗೆ ಸೂಕ್ತ ಪರಿಹಾರವಿತ್ತು, ಯಾತ್ರೆ ನಿಧಾನವಾಗಿ ಮುಂದುವರಿಯುತ್ತಿತ್ತು.

ಈ ಯಾತ್ರೆ ಹಂಗೆರೆಯೆಂಬ ಹಳ್ಳಿಯನ್ನು ದಾಟಿ ತೇರಣ್ಯವೆಂಬ ಹಳ್ಳಿಯನ್ನು ಸಮೀಪಿಸುತ್ತಿತ್ತು. ಬಹುಶಃ ರಾಜ್ಯಗಳಲ್ಲಿ ನಡೆಯುತ್ತಿದ್ದ ಚುನಾವಣೆಯ ಬಿಸಿ, ಉದ್ಭವಿಸಿ ಬರಬೇಕಾಗಿದ್ದ ಆಂಜನೇಯನಿಗೂ ತಟ್ಟಿತು ಎನಿಸುತ್ತದೆ. ಕರ್ನಾಟಕಕ್ಕಿಂತ ತಮಿಳುನಾಡಿನಲ್ಲಿ ಅಧರ್ಮ ಹೆಚ್ಚಿದೆ ಅಲ್ಲಿಗೆ ಏಕೆ ಹೋಗಬೇಕು ಎಂದೋ, ತನಗೂ ಕರ್ನಾಟಕಕ್ಕೂ ಹುಟ್ಟು ಸಂಬಂಧವಿದೆಯೆಂದೊ, ಅಥವಾ ತಮಿಳುನಾಡು ತಲುಪಿದರೆ, ತಾನು ಉದ್ಭವವಾಗಬೇಕಾಗುತ್ತದೆ, ಈ ಪ್ರಪಂಚಕ್ಕೆ ಬರದೇ ಇರುವುದೇ ಒಳ್ಳೆಯದು ಎಂದೋ, ಅವನಿಗೇ ತಿಳಿದಿರುವ ಯಾವುದೋ ಕಾರಣಕ್ಕಾಗಿ, ಒಂದು ರಸ್ತೆಯ ಮೂಲೆಯಲ್ಲಿ ತಿರುಗುತ್ತಿರುವಾಗ, ಮತ್ತೊಂದು ಬಯಲಿಗೆ ಟ್ರಾಲಿಯಿಂದ ಆತ ಹಾರಿ ಕುಳಿತುಬಿಟ್ಟ. ಪಾಪ, ಟ್ರಸ್ಟಿಗಳು, ಅಮೃತವನ್ನು ಕಳೆದುಕೊಂಡ ರಾಕ್ಷಸರಂತೆ, ನಿರಾಶರಾಗಿ ತಮ್ಮ ರಾಜ್ಯದ ದೇವತೆಯನ್ನೇ ಪೂಜಿಸಲು ಹಿಂತಿರುಗಿದರು.

ಕತೆ ಇಲ್ಲಿಗೇ ಮುಗಿಯಲಿಲ್ಲ. ಅಕ್ಕ ಪಕ್ಕದ ಹಳ್ಳಿಯ ಜನಗಳು ಈ ಬೃಹದಾಕಾರದ ಕಲ್ಲನ್ನು ನೋಡಲು ಶುರು ಮಾಡಿದರು. ಆಂಜನೇಯ ಇನ್ನೂ ಹೊರ ಬರದಿದ್ದರೇನು, ಅವನು ಅದರಲ್ಲೇ ಅಡಗಿದ್ದಾನೆ, ಅವನನ್ನು ತೃಪ್ತಿ ಪಡಿಸದಿದ್ದರೆ ಅವನು ಕೋಪಗೊಂಡು ಶಪಿಸಬಹುದು ಎಂದು ಹೆದರಿ ಪೂಜಿಸಲಾರಂಭಿಸಿದರು. ಆ ಕಲ್ಲಿಗೇ ಅಲಂಕಾರ ಪೂಜೆ ಎಲ್ಲಾ ಶುರುವಾಯಿತು. ಎಲ್ಲಾ ಕಡೆಯಿಂದ ಜನ ಬರಲಾರಂಭಿಸಿದರು. ಬೇಕಾದಷ್ಟು ಅಂಗಡಿ, ಹೋಟೆಲುಗಳು ಬಂದವು. ಯಾರಿಗೂ ಗೊತ್ತಿರದಿದ್ದ ತೇರಣ್ಯ ಹಳ್ಳಿ ಈಗ ಪ್ರಸಿದ್ಧ ತೀರ್ಥಸ್ಥಳವಾಗುತ್ತಿದೆ. ನಿಮ್ಮ ಪಯಣವೂ ತೇರಣ್ಯದತ್ತ ಚಲಿಸಲಿ. ✻